## ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012.**

**ಸಂಖ್ಯೆ:** ಪಪೂಶಿಇ/ಎಸ್‌ಎಟಿಎಸ್/2018-19 ದಿನಾಂಕ: 14-05-2019

**ಸುತ್ತೋಲೆ**

**ವಿಷಯ:** ಕಾಲೇಜು ಬದಲಾವಣೆ ಮಾಡಿಕೊಂಡು ದಾಖಲಾದ ವಿದ್ಯಾರ್ಥಿಗಳ ಮಾಹಿತಿ, ಬ್ರೇಕ್ ಅಡ್ಮೀಶನ್, ಫಲಿತಾಂಶ ಪ್ರಮೋಶನ್‌ನ್ನು ಎಸ್‌ಎಟಿಎಸ್‌ನಲ್ಲಿ ಸಲ್ಲಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019-20 ನೇ ಸಾಲಿಗೆ ದ್ವಿತೀಯ ಪಿಯುಸಿ ತರಗತಿಗೆ ಕಾಲೇಜು ಬದಲಾವಣೆ ಮಾಡಿಕೊಂಡು ದಾಖಲಾದ ವಿದ್ಯಾರ್ಥಿಗಳ ಮಾಹಿತಿಯನ್ನು ಎಸ್‌ಎಟಿಎಸ್ ನಲ್ಲಿ ದಾಖಲಿಸಲು ಅವಕಾಶ ಮಾಡಿಕೊಡಲಾಗಿದೆ. ಕಾಲೇಜು ಬದಲಾವಣೆ ಮಾಡಿ ದ್ವಿತೀಯ ಪಿಯುಸಿ ತರಗತಿಗೆ ದಾಖಲಾತಿಯನ್ನು ಮಾಡಲು ದಿನಾಂಕ: 10-06-2019 ರೊಳಗೆ ನೋಂದಣಿ ಮಾಡಲು ಸೂಚಿಸಲಾಗಿತ್ತು. ಆದರೆ ಕೆಲವು ಕಾಲೇಜುಗಳವರು, ಸದರಿ ಪ್ರಕ್ರಿಯೇಯನ್ನು ಮುಗಿಸಿರುವುದಿಲ್ಲ.

ಮುಂದುವರೆದು ಕಾಲೇಜು ಬದಲಾವಣೆ ಪ್ರಕ್ರಿಯೇ, ಬ್ರೇಕ್ ಅಡ್ಮೀಶನ್ ಪ್ರಕ್ರಿಯೇ, ಫಲಿತಾಂಶ ಪ್ರಕ್ರಿಯೇ, ಭಾಷಾ ತಿದ್ದುಪಡಿ ಹಾಗೂ ಪ್ರಮೋಶನ್ ಕಾರ್ಯವನ್ನು ನಿರ್ವಹಿಸಲು ದಿನಾಂಕ: 01-07-2019 ರವರೆಗೆ ವಿಸ್ತರಿಸಲಾಗಿದೆ.

ಸಲ್ಲಿಸಿದ ಮಾಹಿತಿಯ ಪೂರ್ಣತೆ ಹಾಗೂ ನಿಖರತೆಗೆ ಪ್ರಾಂಶುಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ ಹಾಗೂ ದಿನಾಂಕ: 01-07-2019ರ ನಂತರ ಮೇಲಿನ ಯಾವುದೇ ಕಾರ್ಯಗಳನ್ನು ನಿರ್ವಹಿಸಲು ಅವಕಾಶವಿರುವುದಿಲ್ಲ.

ಮೇಲಿನ ಎಲ್ಲಾ ಕಾರ್ಯಗಳ ಹೆಚ್ಚಿನ ಮಾಹಿತಿಗಾಗಿ ಯುಸರ್ ಮ್ಯಾನ್ಯುಲ್‌ಅನ್ನು ಎಸ್‌ಎಟಿಎಸ್ ಪೋರ್ಟ್‌ಲ್‌ನಲ್ಲೇ ಪಡೆಯಬಹುದು. ಈ ಪ್ರಕ್ರಿಯೆಯಲ್ಲಿ ಏನಾದರು ತೊಂದರೆ ಅಥವಾ ಅಡಚಣೆ ಇದಲ್ಲಿ dpuesats@gmail.com ಗೆ ಇ-ಮೇಲ್ ಮೂಲಕ ಆಕ್ಷೇಪಣೆ ಸಲ್ಲಿಸುವುದು. ಸದರಿ ಪ್ರಕ್ರಿಯೆಯು ದಿನಾಂಕ: 01-07-2019 ರಂದು ಕಡ್ಡಾಯವಾಗಿ ಕೊನೆಯ ದಿನಾಂಕವಾಗಿರುತ್ತದೆ.

ಸೂಚನೆ:

**ಎಲ್ಲಾ ಪ್ರಾಂಶುಪಾಲರು ಕಾಲೇಜು ಸೂಚನಾ ಫಲಕದಲ್ಲಿ ಸದರಿ ಮಾಹಿತಿಯನ್ನು ಕಡ್ಡಾಯವಾಗಿ ಪ್ರಕಟಿಸಿ ಹಾಗೂ ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರಲು ಈ ಮೂಲಕ ಸೂಚಿಸಿದೆ.**

18/6/19

ಜಂಟಿ ನಿರ್ದೇಶಕರು(ಆಡಳಿತ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ. (ಕ್ರಮ ಕೈಗೊಳ್ಳಲು)
2. ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ.
3. ಕಛೇರಿ ಪ್ರತಿ.